## ಪ್ರಥಮ ದರ್ಜೆ ಹಿರಿಯ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯ ಸಿಂದಗಿ

ಪಿರ್ಯಾದಿದಾರ :

ಸರಕಾರದ ಪರವಾಗಿ,
ಸಿ.ಪಿ.ಐ. ಸಿಂದಗಿ ಸರ್ಕಲ್ .

ಃ ವಿರುದ್ಧ ಃ

ಆರೋಪಿ- **:**-ಅಜಯ ತಂದೆ ಅಣ್ಣಾಸಾಹೇಬ @ ಅಣ್ಣಾಸೋ ಮಹಾತ್ಮೇ

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಆರೋಪಿತರ ಹೇಳಿಕೆ

ಪ್ರಶ್ನೆ 1 ಃ ಅಭಿಯೋಜನೆ ಪರ ಸಾಕ್ಷಿ ವಿಚಾರಣೆ ಕೇಳಿರುತ್ತೀರಾ?

ಆರೋಪಿ ಉತ್ತರ ಃ

ಪ್ರಶ್ನೆ 2 ಃ ಅಭಿಲಾಷೆ ಉಡಚಾಣ ಚಾ.ಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾ.ಸಾ. 4,5,9,10 ರವರ ಪರಿಚಯ ಇದೆ. ಚಾ.ಸಾ. 6 ರಿಂದ 8 ರವರ ಪರಿಚಯ ಇಲ್ಲ. ಆರೋಪಿ ನಂ.1 ಪರಿಚಯ ಇದೆ. ಆರೋಪಿ ನಂ.2 ಪರಿಚಯ ಇಲ್ಲ. ಮೃತ ರಾಜವರ್ಧನ ರವರ ಪರಿಚಯ ಇಲ್ಲ. 2022 ಪೇಬ್ರುವರಿಯಲ್ಲಿ ಒಂದು ನಾನು ನನ್ನ ಟ್ರಾಕ್ಟರಗೆ ಟ್ರೇಲರಗಳನ್ನು ಜೋಡಿಸಿಕೊಂಡು ಕಬ್ಬನ್ನು ತುಂಬಿಕೊಂಡು ಗುಬ್ಬೆವಾಡದಿಂದ ಮಲಘಾಣ ಕಾರಖಾನೆಗೆ ಹೊಗುತ್ತಿದ್ದೆ. ಗೋಲಗೇರಿ ಬೈಪಾಸ್ ನಿಂದ 100 ಮೀಟರ್ ದೂರದಲ್ಲಿ ಹೊಗುತ್ತಿದ್ದಾಗ ಹಿಂದಿನಿಂದ ಕಾರ ನವರು ಬಂದು ಹಿಂದಿನಿನ ಕೊನೆಯ ಟ್ರೇಲರಗೆ ಡಿಕ್ಕಿ ಪಡಿಸಿರುತ್ತಾರೆ. ಆ ಅಪಘಾತದ ಪರಿಣಾಮವಾಗಿ ನನ್ನ ಟ್ರಾಕ್ಟರ್ ನ ಟ್ರೇಲರ್ ನ ಹಿಂದಿನ 02 ಗಾಲಿಗಳು ಕಿತ್ತುಹೊಗಿದ್ದು, ನಾನು ನನ್ನ ಗಾಡಿಯನ್ನು ನಿಲ್ಲಿಸಿ, ಕೆಳಗೆ ಇಳಿದು ನೋಡಲಾಗಿ, ಅಪಘಾತ ಪಡಿಸಿದಕಾರ ವಾಹನಕ್ಕೆ ಡಿಕ್ಕಿ ಪಡಿಸಿ ತಿರುಗಿ ನಿಂತಿದ್ದು, ಕಾರಿನ ಚಾಲಕನಿಗೆ ಗಾಯಗಳು ಆಗಿದ್ದು, ಕಾರಿನಲ್ಲಿ

ಪ್ರಯಾಣಿಸುತ್ತಿದ್ದ ಇನ್ನೊಬ್ಬನಿಗೆ ಭಾರಿ ಗಾಯಗಳು ಆಗಿ, ಅಲ್ಲೇ ಸ್ಥಳದಲ್ಲಿಮ ರಣ ಹೊಂದಿರುತ್ತಾರೆ. ನಂತರ ಅಪಘಾತವನ್ನು ನೋಡಿ ಅಲ್ಲೇ ಪಕ್ಕದಲ್ಲಿದ್ದ ಜನರು ಬಂದು ಅವರನ್ನು ಕಾರಿನಿಂದ ಹೊರಗೆ ತೆಗೆದಿರುತ್ತಾರೆ. ಕಾರಿನ ಚಾಲಕನ ಹಣೆಗೆ ಕೈಗೆ ಗಾಯಗಳು ಆಗಿದ್ದವು. ಕಾರಿನ ನಂಬರ ನನಗೆ ನೆನಪಿಲ್ಲ. ಆದರೆ ಅದು ಮಹಾರಾಷ್ಟ್ರ ನೊಂದಣಿಯ ಕಾರು ಆಗಿತ್ತು. ಸದರಿ ಕಾರಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆತನು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಿದ್ದಾರೆ. ನಾನು ಚಾಲನೆ ಮಾಡುತ್ತಿದ್ದ ಟ್ರ್ಯಾಕ್ಟರ್ ಚಾಸಾ9 ರವರಿಗೆ ಸೇರಿದ್ದು ಆಗಿತ್ತು. ಆ ದಿನ ಅರೋಪಿ ನಂ.1 ರವರು ಮಧ್ಯ ಸೇವನೆ ಮಾಡಿ ಕಾರನ್ನು ಚಾಲನೆ ಮಾಡಿದ್ದು, ಆತನ ತಪ್ಪಿನಿಂದ ಈ ಅಪಘಾತವು ಆಗಿರುತ್ತದೆ. ಈ ಬಗ್ಗೆ ನಾನು ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ದೂರನ್ನು ನಿ.ಪಿ. 1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1 ಎ ಎಂದು ಗುರುತಿಸಿರುವ ಬಗ್ಗೆ ಸಾಕ್ಷ್ಯ ನುಡಿಯುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಆರೋಪಿ ಉತ್ತರ ಃ

ಪ್ರಶ್ನೆ 3 ಃ ವಿಠಲ ಮಹಾತ್ಮೆ ಚಾ.ಸಾ.4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾ.ಸಾ. 1 ರವರ ಪರಿಚಯ ಇಲ್ಲ. ಚಾ.ಸಾ. 5 ನನ್ನ ಮಗ. ಚಾ.ಸಾ.6 ರಿಂದ 10 ರವರ ಪರಿಚಯ ಇಲ್ಲ. ಮೃತ ರಾಜವರ್ಧನ ನನ್ನ ಮಗ. ಅವರು ಅಪಘಾತದಲಿ ಮರಣ ಹೊಂದಿದ್ದಾರೆ. ದಿ.08-03-2022 ರಂದು ಯಂಕಂಚಿ ಬೈ ಪಾಸ್ ಹತ್ತಿರ ಅಪಘಾತವಾಗಿತ್ತು. ಆಗ ನಾನು ಶಿರೋಳದಲ್ಲಿ ಇದ್ದೆ. ನನಗೆ ಫೋನ್ ಮೂಲಕ ಅಪಘಾತದ ಬಗ್ಗೆ ಮಾಹಿತಿ ಬಂದಿತ್ತು. ನಂತರ ನಾನು ಮರು ದಿನ ಬೆಳಿಗ್ಗೆ 7-00 ಗಂಟೆ ಸುಮಾರಿಗೆ ಪೊಲೀಸ್ ಠಾಣೆಗೆ ಬಂದಿರುತ್ತೇನೆ. ನಂತರ ಸರಕಾರಿ ಆಸ್ಪತ್ರೆಯಲ್ಲಿ ನನ್ನ

ಮಗನ ಮೃತ ದೇಹವನ್ನು ನೋಡಿರುತ್ತೇನೆ. ಆತನ ತಲೆಗೆ ಗಾಯಗಳು ಆಗಿ ಮರಣ ಹೊಂದಿದ್ದನು. ಆರೋಪಿಯು ಕಾರನ್ನು ಚಾಲನೆ ಮಾಡುತ್ತಿದ್ದಾಗ, ಮುಂದೆ ಹೊಗುತ್ತಿದ್ದ ಟ್ರ್ಯಾಕರಗೆ ಅಪಘಾತ ಪಡಿಸಿದ್ದರಿಂದ ಕಾರಿನಲ್ಲಿದ್ದ, ನನ್ನ ಮಗನಿಗೆ ಗಾಯಗಳು ಆಗಿ ಮರಣ ಹೊಂದಿದ್ದಾರೆ ಎಂದು ನನಗೆ ಕೇಳಿ ಗೊತ್ತಾಗಿರುತ್ತದೆ. ಸದರಿ ಟ್ರ್ಯಾಕರ ನಾನು ನೋಡಿದ್ದೇನೆ. ಆದರೆ ಅದರ ನಂಬರ ಗೊತ್ತಿಲ್ಲ. ಕಾರ ನಂ. 7990 ಆಗಿತ್ತು. ಅಪಘಾತವು ಯಾರ ನಿರ್ಲಕ್ಷತನದಿಂದ ಸಂಭವಿಸಿದೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಆರೋಪಿ ಉತ್ತರ ಃ

ಪ್ರಶ್ನೆ 4 ಃ ವೈಷ್ಣವ ಮಹಾತ್ಮೆ ಚಾ.ಸಾ.5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾ.ಸಾ. 1 ರವರ ಪರಿಚಯ ಇಲ್ಲ. ಚಾ.ಸಾ. 4 ನನ್ನ ತಂದೆ. ಚಾ.ಸಾ. 6 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಮೃತ ರಾಜವರ್ಧನ ನನ್ನ ಸಹೋದರ, ಅವರು ಅಪಘಾತದಲ್ಲಿ ಮರಣ ಹೊಂದಿದ್ದಾರೆ. ಆಗ ನಾನು ಮನೆಯಲ್ಲಿ ಇದ್ದೆ. ದಿ.08-03-2022 ರಂದು ಯಂಕಂಚಿ ಬೈ ಪಾಸ್ ಹತ್ತಿರ ಅಪಘಾತವಾಗಿತ್ತು. ಆಗ ನಾನು ಶಿರೋಳದಲ್ಲಿ ಇದ್ದೆ. ನನಗೆ ಫೋನ್ ಮೂಲಕ ಅಪಘಾತದ ಬಗ್ಗೆ ಮಾಹಿತಿ ಬಂದಿತ್ತು. ನಂತರ ನಾನು ಮರು ದಿನ ಬೆಳಿಗ್ಗೆ 7-00 ಗಂಟೆ ಸುಮಾರಿಗೆ ಪೊಲೀಸ್ ಠಾಣೆಗೆ ಬಂದಿರುತ್ತೇನೆ. ನಂತರ ಸರಕಾರಿ ಆಸ್ಪತ್ರೆಯಲ್ಲಿ ನನ್ನ ಸಹೋದರನ ಮೃತ ದೇಹವನ್ನು ನೋಡಿರುತ್ತೇನೆ. ಆತನ ತಲೆಗೆ ಗಾಯಗಳು ಆಗಿ ಮರಣ ಹೊಂದಿದ್ದನು. ಆರೋಪಿಯು ಕಾರನ್ನು ಚಾಲನೆ ಮಾಡುತ್ತಿದ್ದಾಗ, ಮುಂದೆ ಹೊಗುತ್ತಿದ್ದ ಟ್ರ್ಯಾಕರಗೆ ಅಪಘಾತ ಪಡಿಸಿದ್ದರಿಂದ ಕಾರಿನಲ್ಲಿದ್ದ, ನನ್ನ ಸಹೋದರನಿಗೆ ಗಾಯಗಳು ಆಗಿ

ಮರಣ ಹೊಂದಿದ್ದಾರೆ ಎಂದು ನನಗೆ ಕೇಳಿ ಗೊತ್ತಾಗಿರುತ್ತದೆ. ಸದರಿ ಟ್ರ್ಯಾಕರ ನಾನು ನೋಡಿದ್ದೇನೆ. ಆದರೆ ಅದರ ನಂಬರ ಗೊತ್ತಿಲ್ಲ. ಕಾರ ನಂ. 7990 ಆಗಿತ್ತು. ಅಪಘಾತವು ಯಾರ ನಿರ್ಲಕ್ಷತನದಿಂದ ಸಂಭವಿಸಿದೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಆರೋಪಿ ಉತ್ತರ ಃ

ಪ್ರಶ್ನೆ 5 ಃ ಸಂತೋಷ ಮಾಳಿ, ಚಾ.ಸಾ.6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾ.ಸಾ. 1 ರವರ ಪರಿಚಯ ಇಲ್ಲ. ಚಾ.ಸಾ. 4 ನನ್ನ ತಂದೆ. ಚಾ.ಸಾ. 6 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಮೃತ ರಾಜವರ್ಧನ ನನ್ನ ಸಹೋದರ, ಅವರು ಅಪಘಾತದಲ್ಲಿ ಮರಣ ಹೊಂದಿದ್ದಾರೆ. ಆಗ ನಾನು ಮನೆಯಲ್ಲಿ ಇದ್ದೆ. ದಿ.08-03-2022 ರಂದು ಯಂಕಂಚಿ ಬೈ ಪಾಸ್ ಹತ್ತಿರ ಅಪಘಾತವಾಗಿತ್ತು. ಆಗ ನಾನು ಶಿರೋಳದಲ್ಲಿ ಇದ್ದೆ. ನನಗೆ ಫೋನ್ ಮೂಲಕ ಅಪಘಾತದ ಬಗ್ಗೆ ಮಾಹಿತಿ ಬಂದಿತ್ತು. ನಂತರ ನಾನು ಮರು ದಿನ ಬೆಳಿಗ್ಗೆ 7-00 ಗಂಟೆ ಸುಮಾರಿಗೆ ಪೊಲೀಸ್ ಠಾಣೆಗೆ ಬಂದಿರುತ್ತೇನೆ. ನಂತರ ಸರಕಾರಿ ಆಸ್ಪತ್ರೆಯಲ್ಲಿ ನನ್ನ ಸಹೋದರನ ಮೃತ ದೇಹವನ್ನು ನೋಡಿರುತ್ತೇನೆ. ಆತನ ತಲೆಗೆ ಗಾಯಗಳು ಆಗಿ ಮರಣ ಹೊಂದಿದ್ದನು. ಆರೋಪಿಯು ಕಾರನ್ನು ಚಾಲನೆ ಮಾಡುತ್ತಿದ್ದಾಗ, ಮುಂದೆ ಹೊಗುತ್ತಿದ್ದ ಟ್ರ್ಯಾಕರಗೆ ಅಪಘಾತ ಪಡಿಸಿದ್ದರಿಂದ ಕಾರಿನಲ್ಲಿದ್ದ, ನನ್ನ ಸಹೋದರನಿಗೆ ಗಾಯಗಳು ಆಗಿ ಮರಣ ಹೊಂದಿದ್ದಾರೆ ಎಂದು ನನಗೆ ಕೇಳಿ ಗೊತ್ತಾಗಿರುತ್ತದೆ. ಸದರಿ ಟ್ರ್ಯಾಕರ ನಾನು ನೋಡಿದ್ದೇನೆ. ಆದರೆ ಅದರ ನಂಬರ ಗೊತ್ತಿಲ್ಲ. ಕಾರ ನಂ. 7990 ಆಗಿತ್ತು. ಅಪಘಾತವು ಯಾರ ನಿರ್ಲಕ್ಷತನದಿಂದ ಸಂಭವಿಸಿದೆ

ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಆರೋಪಿ ಉತ್ತರ ಃ

ಪ್ರಶ್ನೆ 6 ಃ ಶಿವಶರಣ ಕೊಡಗೂಳಿ, ಚಾ.ಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾ.ಸಾ. 1 ಮತ್ತು 3 ರವರ ಪರಿಚಯ ಇದೆ. ಮೃತನ ಪರಿಚಯ ಇದೆ. ಅವರು ಯಂಕಂಚಿ ಬೈ ಪಾಸ್ ಹತ್ತಿರ ದಿ. 09-03-2022 ರಂದು ಅಪಘಾತದಲ್ಲಿ ಮರಣ ಹೊಂದಿದ್ದಾರೆ. ಸಾಕ್ಷಿಯು ಶವ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.7 ಎ ಎಂದು ಗುರುತಿಸಲಾಯಿತು. ಫೊಟೊವನ್ನು ನಿ.ಪಿ. 8 ಎಂದು ಗುರುತಿಸಲಾಯಿತು.ಸಾಕ್ಷಿಯು ಗುನ್ನಾ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.9 ಎ ಎಂದು ಗುರುತಿಸಲಾಯಿತು. ಫೊಟೊವನ್ನು ನಿ.ಪಿ. 10 ಮತ್ತು 11 ಎಂದು ಗುರುತಿಸಲಾಯಿತು. ನಿ.ಪಿ. 7 ಕ್ಕೆ ಶವ ಪಂಚನಾಮೆಯ ಸಮಯದಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ. 9 ಕ್ಕೆ ಗುನ್ನಾ ಜಾಗದಲ್ಲಿ ಸಹಿ ಮಾಡಿರುತ್ತೇನೆ. ಯಂಕಂಚಿ ಬೈ ಪಾಸ್ ಹತ್ತಿರ ಕಬ್ಬಿನ ಟ್ರ್ಯಾಕ್ಟರ ಮತ್ತು ಒಂದು ಕಾರು ಇತ್ತು. ಯಂಕಂಚಿ ಬೈ ಪಾಸ್ ಹತ್ತಿರ ಪೊಲೀಸರು ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಆರೋಪಿ ಉತ್ತರ ಃ

ಪ್ರಶ್ನೆ 7 ಃ- ನೀವು ಏನಾದರು ಹೇಳುವುದು ಇದೆಯೇ ?
1 ನೇ ಆರೋಪಿ ಉತ್ತರ ಃ

2 **ನೇ ಆರೋಪಿ ಉತ್ತರಃ**

ಪ್ರಶ್ನೆ 8 ಃ– ನಿಮ್ಮ ಪರವಾಗಿ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರಪಡಿಸುತ್ತೀರಾ?

**ಆರೋಪಿ ಉತ್ತರ** ಃ

(ಸದರ ಮೇಲ್ಕಾಣಿಸಿದ ಸಾಕ್ಷಿದಾರರ ಹೇಳಿಕೆ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಕೇಳಿ ಉತ್ತರ ಪಡೆಯಲಾಯಿತು).

ದಿ. 08/06/2026

SD/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಸಿಂದಗಿ